# ನಾಸ್ತಿಕರು ಮತ್ತು ದೈವಿಕತೆ

ಬಡತನಕ್ಕೂ ದೇವರಿಗೂ ಎಲ್ಲಿಲ್ಲದ ನಂಟು. ದೇವರಿಗೆ ಬಡವನ ಮೇಲೆಯೆ ಹೆಚ್ಚು ಪ್ರೀತಿ. ನಮ್ಮ ಧಾರ್ಮಿಕ ಕಥೆಗಳೂ ಸಹ ಬಡತನವನ್ನು ದೈವೀಕರಿಸುತ್ತವೆ ಅಥವಾ ಅಲಕ್ಷಿತರ ಪರವಾಗಿರುತ್ತವೆ. ಕೃಷ್ಣ ದುರ್ಯೋಧನನ ಅಟ್ಟಹಾಸವನ್ನು ಮಣಿಸಲು ವಿದುರನ ಮನೆಗೆ ಕರೆಯದ ಅತಿಥಿಯಾಗಿ ಹೋಗುತ್ತಾನೆ. ಲಿಚ್ಛವಿ ರಾಜರು ಸತ್ಕಾರಕ್ಕಾಗಿ ಕಾಯುತ್ತಿದ್ದರೂ ಬುದ್ಧ ಆಮ್ರಪಾಲಿಯ ಆಹ್ವಾನವನ್ನೆ ಮನ್ನಿಸುತ್ತಾನೆ. ಇಂಥ ಅನೇಕ ಉದಾಹರಣೆಗಳು ನಮಗೆ ಧಾರ್ಮಿಕ ಗ್ರಂಥಗಳಲ್ಲಿ ಸಿಕ್ಕುತ್ತವೆ. ಬಡತನ ಎಂದರೆ ಇಲ್ಲದಿರುವುದು. ಬದುಕಿಗೆ ಅಗತ್ಯವಾದದ್ದು ಏನೋ ಇಲ್ಲದಿರುವುದು. ಭೌತಿಕ ವಸ್ತುಗಳ ಕೊರತೆ. ಅದು ಅಷ್ಟೇನು ಮುಖ್ಯವಲ್ಲ ಎಂಬುದನ್ನು ಧಾರ್ಮಿಕತೆ ಹೇಳುತ್ತದೆ. ಆದರೆ ಗುಣಾತ್ಮಕ ಮೌಲ್ಯಗಳು ಮನುಷ್ಯರನ್ನು ಗೌರವಾನ್ವಿತ ವ್ಯಕ್ತಿಗಳನ್ನಾಗಿ ಮಾಡುತ್ತವೆ. ದಾಸಿಪುತ್ರನಾದ ವಿದುರನಿಗೂ ವೇಶ್ಯೆಯಾಗಿದ್ದ ಆಮ್ರಪಾಲಿಗೂ ಸಂದ ಗೌರವ, ಅವರ ಜೀವನಮೌಲ್ಯಗಳು ಉನ್ನತವಾಗಿದ್ದರಿಂದ ಸಂದಂಥವು. ಇಲ್ಲಿ ದೈವಿಕತೆ ಬಡವರ ಪರವಾಗಿರುವಂತೆ ತೋರಿದರೂ ಅದು ಹೇಳುತ್ತಿರುವ ಧಾರ್ಮಿಕತೆ ಮನುಷ್ಯಪರವಾದುದು ಎಂಬುದನ್ನು ಗಮನಿಸಬೇಕು. ಎಲ್ಲ ಧರ್ಮಗಳು ಮಾನವೀಯತೆಗೆ ಶ್ರೀಮಂತಿಕೆಯ ಅಗತ್ಯವಿಲ್ಲ ಎಂಬ ಅಂಶವನ್ನು ಒತ್ತಿ ಹೇಳುತ್ತವೆ. ಹಾಗೆಯೆ ದೇವರ ಅಗತ್ಯವೂ ಇಲ್ಲ ಎಂಬುದನ್ನು ಬುದ್ಧ ಹೇಳುತ್ತಾನೆ. ಈ ಜಗತ್ತಿನಲ್ಲಿ ಇನ್ನೊಂದು ಆಲೋಚನಾ ವಿಧಾನವಿದೆ, ಬೇರೊಂದು ಜೀವನ ಕ್ರಮವಿದೆ. ಅದನ್ನು ಸಹಿಸಿಕೊಳ್ಳುತ್ತೇನೆ ನನ್ನ ಪ್ರೀತಿಯಲ್ಲಿ, ನನ್ನ ಪ್ರಾರ್ಥನೆಯಲ್ಲಿ ಇತರರಿಗೂ ಒಂದಿಷ್ಟು ಜಾಗವಿದೆ ಎಂಬುದೇ ಧಾರ್ಮಿಕತೆ. ಆಗ ಒಡಕಿಗೆ ತಾವಿರುವುದಿಲ್ಲ.

ಬಡವನು ಸಬಲನಾಗಲು ದೇವರ ಮೊರೆಹೋಗುತ್ತಾನೆ. ಸಬಲನು ಸಿರಿವಂತನಾಗಲು ದೇವರಿಗೆ ಮೊರೆಹೋಗುತ್ತಾನೆ. ಹಾಗೆಯೆ ಸಿರಿವಂತನು ತನ್ನ ಸಿರಿತನವನ್ನು ರಕ್ಷಿಸಿಕೊಳ್ಳಲು ದೇವರ ಬಳಿ ಹೋಗುತ್ತಾನೆ. ಇದು ಸಾಮಾನ್ಯವಾಗಿ ಕಾಣಬರುವ ಭಕ್ತಪರಂಪರೆ. ಆದರೆ ತಮ್ಮ ಅಂತರಂಗದ ಶುದ್ಧೀಕರಣಕ್ಕಾಗಿ ದೇವರ ಮೊರೆಹೋಗುವುದು, ತಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಲು ಪ್ರಾರ್ಥನೆ ಮಾಡುವುದು. ತಮ್ಮೊಳಗಿನ ಅರಿಷಡ್ವರ್ಗಗಳನ್ನು ನಿಗ್ರಹಿಸಲು ದೇವರನ್ನು ಬೇಡುವುದು ನಿಜವಾದ ಧಾರ್ಮಿಕತೆ. ಆಗ ಮಾತ್ರ ಇನ್ನೊಬ್ಬರ ಮೇಲಿನ ದ್ವೇಷಕ್ಕೆ ಎಡೆಯಿರುವುದಿಲ್ಲ. ಈ ಜೀವಜಗತ್ತಿನ ಎಲ್ಲರೂ ನಮ್ಮ ಪ್ರಾರ್ಥನೆಯ ಕಕ್ಷೆಯೊಳಗೆ ಬಂದಾಗ ಮಾತ್ರ ನಮ್ಮೊಳಗಿನ ಧಾರ್ಮಿಕತೆ ಅರ್ಥಪೂರ್ಣವಾಗುತ್ತದೆ.

ನಾವು ಹರಕು ಬಟ್ಟೆ ಹಾಕಲು ಮುರುಕು ಮೇಜು ಕುರ್ಚಿ ಇಟ್ಟುಕೊಳ್ಳಲು ನಾಚಿಕೊಂಡರೆ ಸಾಲದು. ನಮ್ಮ ಹರಕು ಆಲೋಚನೆಗಳಿಗೆ ಅಳವಡಿಸಿಕೊಂಡ ಮುರುಕು ತತ್ವಗಳಿಗೆ ನಾಚಿಕೆ ಪಟ್ಟುಕೊಳ್ಳಬೇಕು ಎಂದು ಆಲ್ಬರ್ಟ್ ಐನ್‌ಸ್ಟೀನ್ ಹೇಳುತ್ತಾನೆ. ನಾನು ಮತ್ತು ನನ್ನದೇ ಸರಿ ಎಂದು ಲೋಕಕ್ಕೆ ಕರ್ಕಶವಾಗಿ ಸಾರುವುದು ಸಮುದಾಯದ ಒಳಿತಿಗೆ ಸಲ್ಲ. ಕುಕೃತ್ಯಗಳನ್ನು ಮಾಡಿ ದೇವರ ಮೇಲೆ ಹೊರಿಸುವುದಕ್ಕಿಂತ ದೇವರನ್ನು ನೆನೆಯದಿರುವುದೇ ಮೇಲು. ದೇವರಿಲ್ಲದೆಯೂ ಧಾರ್ಮಿಕತೆಯನ್ನು ಹೊಂದಬಹುದು. ಸದಾಚಾರ, ಸತ್ಕಾರ್ಯಗಳು ಇತರರ ಒಳಿತನ್ನು ಬಯಸುವುದು ಕಡಿಮೆ ಧಾರ್ಮಿಕತೆಯಲ್ಲ. ಶ್ರೀಮಂತ ರಾಷ್ಟ್ರಗಳಲ್ಲಿ ಈಗ ಒಂದು ಹೊಸ ವರ್ಗ ಸೃಷ್ಟಿಯಾಗುತ್ತಿದೆ. ಅದು ನಾಸ್ತಿಕ ವರ್ಗ. ಮುಂದುವರೆದ ದೇಶಗಳಲ್ಲಿ ನಾಸ್ತಿಕರ ಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಿದೆ. ಅಂಥವರು ತಮ್ಮಪಾಡಿಗೆ ತಾವು ಇದ್ದು ಬಿಡುತ್ತಾರೆ. ಪರೋಪಕಾರಿಗಳಲ್ಲದಿದ್ದರೂ ಪರಪೀಡಕರಲ್ಲ. ಅಂಥವರಿಂದ ಸಮಾಜಕ್ಕೆ ಯಾವ ಹಾನಿಯೂ ಇಲ್ಲ. ಐಹಿಕ ಭೋಗಭಾಗ್ಯಗಳ ಒಡೆಯರಾದವರು ಪಾಪಿಷ್ಟರೆಂದೇನಲ್ಲ. ಸರ್ವಸಂಗ ಪರಿತ್ಯಾಗಿಯಾಗಿಯೂ ನನ್ನ ಮಾರ್ಗವೇ ಸರಿ ಎನ್ನುವವನು ಪಾಪ ಕೂಪದಲ್ಲಿ ನರಳುತ್ತಿರುವವನೇ. ಬಡದೈವಭಕ್ತನೂ, ಶ್ರೀಮಂತ ನಾಸ್ತಿಕನೂ ಸನ್ಮಾರ್ಗದಲ್ಲಿ ನಡೆದರೆ ಸಮಾಜಕ್ಕೆ ಹಾನಿಯಿಲ್ಲ.

ಈಗ ನಾಸ್ತಿಕರ ಮೇಲೆ ಹಲ್ಲೆಗಳಾಗುತ್ತಿವೆ, ಹತ್ಯೆ ನಡೆಯುತ್ತಿದೆ. ಅದು ಸತ್ಯದ ಮೇಲೆ ನಡೆದ ಹಲ್ಲೆ. ಪುರಾಣ, ಪುಣ್ಯಕಥೆಗಳನ್ನು ಸಾಕ್ಷಿಯಾಗಿಟ್ಟುಕೊಂಡು ಸತ್ಯವನ್ನು ಹೇಳಲಾಗುವುದಿಲ್ಲ. ಅದಕ್ಕೆ ಅನುಭವದ ಪ್ರಮಾಣ ಬೇಕಾಗುತ್ತದೆ. ವಚನಕಾರರು ತಮ್ಮ ಅನುಭವಗಳ ಮೂಲಕವೇ ಒಂದು ಧರ್ಮವನ್ನು ಕಟ್ಟಿಕೊಟ್ಟರು. ಅಂಧಶ್ರದ್ಧೆ, ಮೌಢ್ಯಗಳಿಗೆ ಮುಖಾಮುಖಿಯಾದರು. ಮನುಷ್ಯಪರವಾದ ವೈಚಾರಿಕ ಮನಸ್ಸುಗಳಿಗೆ ವಚನಸಾರವು ಆಪ್ಯಾಯಮಾನವಾಗಿ ಕಾಣಿಸುತ್ತದೆ. ಆದರೆ ವ್ಯಕ್ತಿಸ್ವಾತಂತ್ರ್ಯವನ್ನು, ಸಮಾನತೆಯನ್ನು ಒಪ್ಪದ ಸ್ಥಾಪಿತ ಹಿತಾಸಕ್ತಿಗಳು ಇಂತಹ ಸಿದ್ಧಾಂತಗಳನ್ನೆ ದೇಶದಿಂದ ಉಚ್ಚಾಟನೆ ಮಾಡಿದ ಉದಾಹರಣೆಗಳು ಬುದ್ಧನ ಕಾಲದಿಂದಲೂ ಇವೆ. ಒಂದು ಧರ್ಮ ತನ್ನ ಸ್ವಂತ ಸತ್ವದಿಂದಲೆ ನಿಲ್ಲಬೇಕಾಗುತ್ತದೆ. ಸಮಾನತೆ ಮತ್ತು ಒಳಗೊಳ್ಳುವಿಕೆ ಒಂದು ಧರ್ಮದ ಆಧಾರಸ್ತಂಭಗಳು. ಅವು ಶಿಥಿಲವಾಗಿರುವ ಯಾವುದೇ ಧರ್ಮ ನಿರಂತರ ವೈಚಾರಿಕ ಆಕ್ರಮಣಕ್ಕೆ ಈಡಾಗುವುದು ಸಹಜ. ವ್ಯಕ್ತಿಗಳ ಹತ್ಯೆಯಿಂದ ಸಿದ್ಧಾಂತವು ಸಾಯುವುದಿಲ್ಲ.

■ ಮೂಚಿ

## ಮಾತೇ ಮುತ್ತು

★ ನಿನ್ನೆಯಿಂದ ಕಲಿಯಿರಿ, ಇವತ್ತಿಗಾಗಿ ಬದುಕಿರಿ, ನಾಳೆಯ ಬಗ್ಗೆ ಭರವಸೆ ಇಡಿ. ಆದರೆ ಪ್ರಶ್ನೆ ಕೇಳುವುದನ್ನು ನಿಲ್ಲಿಸಬೇಡಿ.

—ಆಲ್ಬರ್ಟ್ ಐನ್‌ಸ್ಟೀನ್

★ ಒಮ್ಮೆ ನೀವು ಭರವಸೆಯನ್ನು ಆಯ್ಕೆ ಮಾಡಿಕೊಂಡರೆ, ಏನು ಬೇಕಾದರೂ ಸಂಭವಿಸಬಹುದು.

—ಕ್ರಿಸ್ಟೋಫರ್ ರೀವ್

★ ಸ್ವಾತಂತ್ರ್ಯದ ಹೋರಾಟ ಜಗತ್ತಿನಲ್ಲಿ ಎಲ್ಲೂ ಸುಲಭದ ನಡಿಗೆ ಆಗಿರಲಿಲ್ಲ. ಸಾವಿನ ನೆರಳಿನ ಕಣಿವೆಯಲ್ಲಿ ಸಾಗಿಯೇ ಸ್ವಾತಂತ್ರ್ಯದ ಶಿಖರವನ್ನು ಹತ್ತಬೇಕು.

—ನೆಲ್ಸನ್ ಮಂಡೇಲ

★ ಕನಸು ಕಾಣುವುದನ್ನು ನಿಲ್ಲಿಸಿದ ದಿನ ಬದುಕುವುದನ್ನೂ ನಿಲ್ಲಿಸಬೇಕಾಗುತ್ತದೆ.

—ಮಾಲ್ಕಂ ಫೋರ್ಬ್ಸ್

★ ಯಾವ ಮನುಷ್ಯನಿಗೇ ಆಗಲಿ, ಹೃದಯದ ಬಡಿತ ಇಷ್ಟೇ ಎಂದು ನಿಶ್ಚಿತವಾಗಿದೆ. ಹಾಗಾಗಿ ನಾನು ಯಾವ ಬಡಿತವನ್ನೂ ವ್ಯರ್ಥ ಮಾಡಲು ಬಯಸುವುದಿಲ್ಲ.

—ನೀಲ್ ಆರ್ಮ್‌ಸ್ಟ್ರಾಂಗ್

★ ಸಂತೋಷ ಎನ್ನುವುದು ನಿಮ್ಮಲ್ಲಿ ಏನಿದೆ ಅಥವಾ ನೀವು ಯಾರು ಎನ್ನುವುದರ ಮೇಲೆ ಅವಲಂಬಿತವಾಗಿಲ್ಲ. ಅದು ನೀವು ಏನು ಯೋಚಿಸುತ್ತಿದ್ದೀರಿ ಎನ್ನುವುದನ್ನು ಅವಲಂಬಿಸಿದೆ.

—ಗೌತಮ ಬುದ್ಧ

★ ಯಾವ ಧರ್ಮವೇ ಇರಲಿ, ಪವಿತ್ರ ಗ್ರಂಥಗಳಲ್ಲಿ ಸಾಕಷ್ಟು ಒಳ್ಳೆಯ ವಿಚಾರಗಳಿರುತ್ತವೆ. ಅದನ್ನು ಓದಿದಾಕ್ಷಣ ಯಾರೂ ಒಳ್ಳೆಯವರಾಗುವುದಿಲ್ಲ. ಓದಿದ್ದನ್ನು ಅನುಸರಿಸಬೇಕು.

—ರಾಮಕೃಷ್ಣ ಪರಮಹಂಸ

★ ಬೆಳೆಯುತ್ತಾ ಹೋದಂತೆ ನಿಮಗೆ ಎರಡು ಕೈಗಳಿರುವುದು ಅರಿವಾಗುತ್ತದೆ. ಒಂದು ನಿಮಗೇ ಸಹಾಯ ಮಾಡಲು; ಇನ್ನೊಂದು ಇತರರಿಗೆ ಸಹಾಯ ಮಾಡಲು.

—ಆಡ್ರೀ ಹೆಬರ್ನ್

★ ಜೀವನದ ಉದ್ದೇಶವೇ ಸಂತೋಷವಾಗಿ ಇರುವುದು.

—ದಲೈ ಲಾಮ

★ ನಿಮ್ಮ ಜೀವನ ಸೀಮಿತವಾದದ್ದು. ಬೇರೆಯವರ ಜೀವನವನ್ನು ಜೀವಿಸುತ್ತಾ ಸಮಯ ವ್ಯರ್ಥ ಮಾಡದಿರಿ.

—ಸ್ಟೀವ್ ಜಾಬ್ಸ್

★ ನಿಮ್ಮನ್ನು ನೀವು ಕಂಡುಕೊಳ್ಳುವುದು ಜೀವನ ಅಲ್ಲ; ನಿಮ್ಮನ್ನು ನೀವು ಸೃಷ್ಟಿಸಿಕೊಳ್ಳುವುದು ಜೀವನ.

—ಜಾರ್ಜ್ ಬರ್ನಾರ್ಡ್ ಷಾ